**ದಿಃ 03.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರೆದ ಪಾಟೀ ಸವಾಲುಃ ಆರೋಪಿ/ ಆರೋಪಿಗಳ ಪರ ವಕಿಲರಿಂದಃ**

ಈ ಹಣಕಾಸಿನ ವ್ಯವಹಾರಕ್ಕಿಂತ ಮುಂಚೆ ಆರೋಪಿಯ ಜೊತೆ ಬೇರೆ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ಅವರ ಪತ್ನಿಯ ಜೊತೆ ವ್ಯವಹಾರ ಮಾಡಿರುವುದಿಲ್ಲ. ಆದರೆ ಜಮೀನನ್ನು ಕ್ರಯ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ಯಾವ ದಿನಾಂಕ ಎಂದು ನನಗೆ ನೆನಪಿರುವುದಿಲ್ಲ. 4, 20,000/- ರೂ ಗೆ ಜಮೀನಿನ ವ್ಯವಹಾರ ಆಗಿರುತ್ತದೆ. ನೊಂದಾಯಿತ ಕ್ರಯ ಕರಾರು ಪತ್ರ ಆಗಿರುತ್ತದೆ. ಕ್ರಯ ಕರಾರು ಪತ್ರದ ನಡವಳಿಕೆ ಆರೋಪಿ ಮಾಡಿರುವುದಿಲ್ಲ. ಅದರ ಬಗ್ಗೆ ಕೇಸನ್ನು ಹಾಕಿರುತ್ತೇನೆ. ಅದರ ಬಗ್ಗೆ ನೋಟಿಸಿನಲ್ಲಾಗಲಿ, ಪಿರ್ಯಾದಿಯಲ್ಲಾಗಲಿ, ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿರುವುದಿಲ್ಲ. ನಿಪಿ -1 ರಲ್ಲಿರುವ ಬರವಣಿಗೆ ಹಾಗೂ ಸಿಸಿ 30/2024 ರ ನಿಪಿ 1 ರ ಬರವಣಿಗೆ ಒಬ್ಬರದೆ ಎಂದರೆ ಸರಿಯಲ್ಲ. ಒಂದು ಚೆಕ್ಕನ್ನು ಅವರ ಸ್ನೇಹಿತರಿಂದ ಬರೆಸಿ ಕೊಟ್ಟಿರುತ್ತಾರೆ. ನಿಪಿ -1 ರಲ್ಲಿರುವ ಮತ್ತು ಸಿಸಿ 30/2024 ರಲ್ಲಿರುವ ಸಹಿ ಮತ್ತು ಬರವಣಿಗೆ ಮಂಜುಳರವರದ್ದೆ ಆಗಿರುತ್ತದೆ ಆದರೆ ಬರವಣಿಗೆ ಸಹಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ . ನಾನು ಮೊದಲು ಭದ್ರೇಗೌಡರಿಗೆ ಹಣ ಕೊಟ್ಟಿರುತ್ತೇನೆ. ನಾನು ಮಂಜುಳರವರಿಗೆ ಕೊಟ್ಟಂತಹ ತಿಳುವಳಿಕೆ ನೋಟಿಸಿನಲ್ಲಿ ಭದ್ರೇಗೌಡರಿಗೆ ಹಣ ಕೊಟ್ಟಿರುವ ಬಗ್ಗೆ ತಿಳಿಸಿರುವುದಿಲ್ಲ. ನನ್ನ ಹಾಗೂ ಆರೋಪಿಯ ಜೊತೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನ ಕ್ರಯ ಕರಾರು ಪತ್ರದ ಸಂಬಂಧ ಭದ್ರತೆಗಾಗಿ ಪಡೆದುಕೊಂಡಂತಹ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರ ಮುಂಚಿತವಾಗಿಯೇ ಆಗಿರುತ್ತದೆ. ಕ್ರಯ ಕರಾರು ಪತ್ರ ವಿಫಲವಾದ ನಂತರ ಚೆಕ್ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರ ಇನ್ನೂ ಚಾಲ್ತಿಯಲ್ಲಿತ್ತು . ನಾನು ಸುಳ್ಳು ಕೇಸನ್ನು ಭದ್ರೇಗೌಡ ಹಾಗೂ ಮಂಜುಳ ರವರ ವಿರುದ್ಧ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸುಳ್ಳು ಚೆಕ್ ಕೇಸನ್ನು ಹಾಕಿರುತ್ತೇನೆ. ಕರಾರು ಪತ್ರದ ಅವಧಿ ಮುಗಿದ ನಂತರ ಹಣವನ್ನು ನೀಡಿ ಮುಚ್ಚಳಿಕೆ ಪತ್ರವನ್ನು ಬರೆದುಕೊಡು ಎಂದು ಹೇಳಿದ್ದರಿಂದ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಯಾವ ಸ್ವತ್ತಿನ ಸಂಬಂಧ ಕ್ರಯ ಕರಾರು ಪತ್ರ ಮಾಡಿಕೊಳ್ಳಲಾಗಿರುತ್ತದೆ ಎಂದು ನನಗೆ ನೆನಪಿಲ್ಲ. ನಾನು ಚನ್ನರಾಯಪಟ್ಟಣದಲ್ಲಿ10-15 ಕ್ಕಿಂತ ಹೆಚ್ಚಿನ ಕೇಸನ್ನು ಚೆಕ್ ಬೌನ್ಸ್ ಬಗ್ಗೆ ಹಾಗೂ ಕ್ರಯ ಕರಾರು ಪತ್ರದ ಬಗ್ಗೆ ಹಾಕಿರುತ್ತೇನೆ ಎಂದರೆ 12 ಕೇಸು ಇರುತ್ತದೆ ಎಂದು ಹೇಳುತ್ತಾರೆ. ನಾನು ಬಡ್ಡಿ ವ್ಯವಹಾರ ಮಾಡಲು ಕರಾರು ಪತ್ರ ಹಾಗೂ ಚೆಕ್ಕನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ಬಡ್ಡಿಯನ್ನು ಪಡೆಯಲು ಆರೋಪಿಯಿಂದ ಪಡೆದುಕೊಂಡಂತಹ ದಾಖಲಾತಿಯನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರ ಆದ ಮೇಲೆ ನನ್ನ ಖಾತೆಗೆ ಹಣ ಜಮಾ ಆಗಿರುತ್ತದೆ ಎಂದರೆ ಸರಿ ಅದು ಬಡ್ಡಿ ಹಣ ಆಗಿರುತ್ತದೆ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರ ಯಾವ ದಿನಾಂಕ ಆಗಿರುತ್ತದೆ ಎಂದು ನೆನಪಿರುವುದಿಲ್ಲ. ಕ್ರಯ ಕರಾರು ಪತ್ರಕ್ಕೂ ಹಾಗೂ ಚೆಕ್ ಕೊಟ್ಟಿದ್ದಕ್ಕು ಎಷ್ಟು ಸಮಯದ ಅಂತರ ಇರುತ್ತದೆ ಎಂದರೆ ನೆನಪಿರುವುದಿಲ್ಲ. ಅಸಲು ದಾವೆಯ ನಂಬರ್ ನೆನಪಿರುವುದಿಲ್ಲ. ಆ ಕೇಸಿನ ಪ್ರಮಾಣ ಪತ್ರದಲ್ಲಿ ದಾವಾ ಪತ್ರದಲ್ಲಿ ಈ ಕೇಸಿನ ವ್ಯವಹಾರದ ಬಗ್ಗೆ ಹೇಳಿರುವುದಿಲ್ಲ. ನಾನು ಒಂದು ಕೇಸಿನ ಬಗ್ಗೆ ಇನ್ನೊಂದು ಕೇಸಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಮಂಜುಳರವರಿಗೆ ಅತ್ತೆಯ ಶಸ್ತ್ರಚಿಕಿತ್ಸೆಗೆ ಹಣ ಅವಶ್ಯಕತೆ ಇದೆ ಎಂದು ಹೇಳಿದ್ದರಿಂದ ನಾನು ಹಣವನ್ನು ಕೊಟ್ಟಿದ್ದೆ. ಜನವರಿ 2023 ಮೊದಲನೆ ವಾರದಲ್ಲಿ ಮಂಜುಳರವರು ನನ್ನ ಬಳಿ ಬಂದಿರುತ್ತಾರೆ. 27.01.2023 ರಂದು ಹಣವನ್ನು ಕೊಟ್ಟಿರುತ್ತೇನೆ. ನಗದು ರೂಪದಲ್ಲಿ ಹಣವನ್ನು ಕೊಟ್ಟಿರುತ್ತೇನೆ. ನಾನು ಬ್ಯಾಂಕಿನಿಂದ ಹಣವನ್ನು ಡ್ರಾ ಮಾಡಿರುತ್ತೇನೆ. ದಿಃ 20.12.2022 ರಂದು ಡ್ರಾ ಮಾಡಿರುತ್ತೇನೆ. ಅದರ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ನೀಡಲು ನನಗೆ ತೊಂದರೆ ಇಲ್ಲ. ನಾನು ಮಂಜುಳರವರ ಪತಿಯವರ ಸಮಕ್ಷಮದಲ್ಲಿ

ಹಣವನ್ನು ಕೊಟ್ಟಿರುತ್ತೇನೆ. ಆದರೆ ನಾನು ದಾವಾ ಪತ್ರದಲ್ಲಿ , ಪ್ರಮಾಣಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ನಮೂದು ಮಾಡಲು ತೊಂದರೆ ಇತ್ತೆ ಎಂದರೆ ವಿಷಯ ಅವರಿಗೆ ಗೊತ್ತಿದ್ದ ಕಾರಣ ನಮೂದು ಮಾಾಡಿರುವುದಿಲ್ಲ. ಭದ್ರೇಗೌಡರು ಮತ್ತು ಮಂಜುಳರವರು ಕೊಟ್ಟಂತಹ ಕ್ರಯ ಕರಾರು ಪತ್ರದ ಸಂಬಂಧ ದಾಖಲಾತಿಗಳನ್ನು ದುರಪಯೋಗ ಪಡಿಸಿಕೊಂಡು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ನಡೆಸುತ್ತಿದ್ದೆ ಆದ್ದರಿಂದ ಆರೋಪಿಯಿಂದ ಮತ್ತು ಅವರ ಪತ್ನಿಯಿಂದ ಪಡೆದುಕೊಂಡಂತಹ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬಡ್ಡಿ ವ್ಯವಹಾರದಿಂದ ನ್ಯಾಯಾಲಯದಲ್ಲಿ 10-12 ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂ., ಚನ್ನರಾಯಪಟ್ಟಣ